ಸರ್ಕಾರದ ವತಿಯಿಂದ ಪ್ರಕಟವಾದ ಪುಸ್ತಕಗಳು

೪೧ (೩೩೮) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

(ಅ) ಸರ್ಕಾರದ ವತಿಯಿಂದ ಮುದ್ರಿತವಾದ 'ಪೈ ಮಿನಿಸ್ಟರ್ ವಿಸಿಟ್ ಟು ಕರ್ನಾಟಕ ಅಂಡ್ ಆಫ್ಟರ್‌ಮತ್' ಮತ್ತು 'ಮಹಾರಾಷ್ಟ್ರ ಇನ್ ಬೆಳಗಾಂ ದಿ ನೀಡ್‌ಲೆಸ್ ಅಜಿಟೇಷನ್' ಎಂಬ ಎರಡು ಪುಸ್ತಕಗಳನ್ನು ಮುದ್ರಿಸಿ ಶಾಸಕರಿಗೆ ಹಂಚಿದ ಉದ್ದೇಶವೇನು ?

(ಆ) ಈ ಪುಸ್ತಕಗಳನ್ನು ಮುದ್ರಿಸಲು ತಗುಲಿದ ವೆಚ್ಚವೆಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

(ಅ) (೧) ಮುಖ್ಯಮಂತ್ರಿಯವರ ಕೋರಿಕೆಯ ಮೇರೆಗೆ ದಿನಾಂಕ ೧೨-೪-೧೯೬೬ ರಂದು ಕರ್ನಾಟಕ ಬರಗಾಲದ ಪರಿಸ್ಥಿತಿಯನ್ನು ಪ್ರತ್ಯಕ್ಷ ಪರಿಶೀಲಿಸುವುದಕ್ಕಾಗಿ ಪ್ರಧಾನಿಯವರು ಕರ್ನಾಟಕಕ್ಕೆ ಭೇಟಿ ನೀಡಿದರು. ಅವರ ಈ ಅಧಿಕೃತ ಭೇಟಿಯ ಕಾಲಕ್ಕೆ ತಮ್ಮ ಕೆಲವು ಸಭೆಗಳಲ್ಲಿ ಅವರು ಸರಾಯಿ ಬಾಟ್ಲಿಂಗ್ ಪ್ರಕರಣವನ್ನು ಪ್ರಸ್ತಾಪಿಸಿ ಮುಖ್ಯಮಂತ್ರಿಯವರಿಗೆ ಅಧಿಕಾರದಲ್ಲಿರಲು ಹಕ್ಕಿಲ್ಲವೆಂದು ಹೇಳಿದರು. ಈ ವಿಷಯ ಪ್ರಾಮುಖ್ಯವಾಗಿ ದೇಶದ ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾಗಿ ಗೊಂದಲದ ವಾತಾವರಣವನ್ನು ನಿರ್ಮಿಸಿತು. ಈ ಹಿನ್ನೆಲೆಯಲ್ಲಿ ಸತ್ಯ ಸ್ಥಿತಿಯನ್ನು ಎಲ್ಲರಿಗೂ ತಿಳಿಯಪಡಿಸುವುದಕ್ಕಾಗಿ ಮುಖ್ಯ ಮಂತ್ರಿಯವರು ಪ್ರಧಾನಿಯವರೊಂದಿಗೆ ಮಾಡಿದ ಪತ್ರವ್ಯವಹಾರಗಳು ಹಾಗೂ ಪತ್ರಿಕೆಗಳಲ್ಲಿ ಪ್ರಕಟವಾದ ಕೆಲವು ಅಗ್ರಲೇಖ ಹಾಗೂ ಲೇಖನಗಳನ್ನೊಳಗೊಂಡ ಪುಸ್ತಕವನ್ನು ಆಂಗ್ಲ ಹಾಗೂ ಕನ್ನಡ ಭಾಷೆಗಳಲ್ಲಿ ಪ್ರಕಟಿಸಲಾಯಿತು. ಈ ಪುಸ್ತಕದ ಪ್ರಕಟಣೆಯ ಉದ್ದೇಶವನ್ನು ಅದರ ಮುನ್ನುಡಿಯಲ್ಲಿ ಸ್ಪಷ್ಟವಾಗಿ ಕಾಣಿಸಲಾಗಿದೆ.

(೨) ಕರ್ನಾಟಕದ ಗಡಿ ಭಾಗಗಳಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸಲಾಗುತ್ತಿದೆ ಎಂಬ ವಿಷಯವನ್ನು ಮುಂದೊಡ್ಡಿ ಸಂಯುಕ್ತ ಮಹಾರಾಷ್ಟ್ರ ಸಮಿತಿಯವರು ಬೆಳಗಾವಿ ಹಾಗೂ ಇದರ ಗಡಿ ಪ್ರದೇಶಗಳಲ್ಲಿ ಜೂನ್ ೧ ರಿಂದ ಚಳುವಳಿಯನ್ನು ಆರಂಭಿಸಿದರು, ಈ ಚಳುವಳಿ ಮಹಾರಾಷ್ಟ್ರದಿಂದ ಆಮದು ಮಾಡಿಕೊಂಡು ಸತ್ಯಾಗ್ರಹಿಗಳಿಂದ ನಡೆಸಲ್ಪಟ್ಟಿತು. ಹಾಗೂ ಇದರಿಂದಾಗಿ ಆಸ್ತಿಪಾಸ್ತಿ ಹಾನಿ ಹಾಗೂ ಪ್ರಾಣ ಹಾನಿ ಘಟನೆಗಳು ನಡೆದವು, ಇದೊಂದು ಅನಾವಶ್ಯಕ ಸತ್ಯಾಗ್ರಹ ವಾಗಿತ್ತೆಂದು ಎಲ್ಲರಿಗೂ ತಿಳಿಯಪಡಿಸುವುದಕ್ಕೋಸ್ಕರ 'ಮಹಾರಾಷ್ಟ್ರ ಇನ್ ಬೆಳಗಾಂ ದಿ ನೀಡ್‌ಲೆಸ್ ಅಜಿಟೇಷನ್' ಎನ್ನುವ ಪುಸ್ತಕವನ್ನು ಆಂಗ್ಲ ಭಾಷೆಯಲ್ಲಿ ಪ್ರಕಟಿಸಲಾಯಿತು. ಈ ಪುಸ್ತಕದ ಪ್ರಕಟಣೆಯ ಉದ್ದೇಶವನ್ನು ಅದರ ಮುನ್ನುಡಿಯಲ್ಲಿ ಸ್ಪಷ್ಟವಾಗಿ ಕಾಣಿಸಲಾಗಿದೆ.

(ಆ) (೧) ಪೈ ಮಿನಿಸ್ಟರ್ ವಿಸಿಟ್ ಟು ಕರ್ನಾಟಕ ಅಂಡ್ ಆಫ್ಟರ್‌ಮತ್
(ಇಂಗ್ಲೀಷ್) ವೆಚ್ಚ ರೂ. ೩,೭೪೧.೧೫೦.೦೦
ಕನ್ನಡ ಮುದ್ರಣದ ಬಿಲ್ಲು ಪರಿಶೀಲನೆಯಲ್ಲಿದೆ.

(೨) ಮಹಾರಾಷ್ಟ್ರ ಇನ್ ಬೆಳಗಾಂ ದಿ ನೀಡ್‌ಲೆಸ್ ಅಜಿಟೇಷನ್
ವೆಚ್ಚ ರೂ. ೧,೯೨,೪೬೬.೪೫

ಸರಕಾರಿ ನೌಕರರ ವರ್ಗಾವಣೆಯಿಂದ ರಾಜ್ಯದ ಬೊಕ್ಕಸಕ್ಕೆ ಆದ ವೆಚ್ಚದ ಬಗ್ಗೆ

೪೨ (೩೩೯) ಶ್ರೀ ಪ್ರಭಾಕರ್ ರಾಣೆ (ಕಾರವಾರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

(ಅ) ೧೯೬೫-೬೬ ಮತ್ತು ೧೯೬೬-೬೭ನೇ ಸಾಲುಗಳಲ್ಲಿ ವರ್ಗಾವಣೆ ಮಾಡಲ್ಪಟ್ಟ ಒಟ್ಟು ಸರ್ಕಾರಿ ನೌಕರರ ಸಂಖ್ಯೆ ಎಷ್ಟು (ಇಲಾಖಾವಾರು, ದರ್ಜೆವಾರು ಮತ್ತು ಜಿಲ್ಲಾವಾರು ವಿವರ ನೀಡುವುದು).

(ಆ) ಈ ನೌಕರರ ವರ್ಗಾವಣೆ ಸಂಬಂಧದಲ್ಲಿ ಸರ್ಕಾರಕ್ಕೆ ತಗುಲಿದ ವೆಚ್ಚವಿಷ್ಟು ?

(ಇ) ಇದರಲ್ಲಿ ಅವಧಿಪೂರ್ವ ವರ್ಗಾವಣೆಗಳೆಷ್ಟು ಮತ್ತು ಇದಕ್ಕೆ ತಗುಲಿದ ವೆಚ್ಚವೆಷ್ಟು ?
(ಇಲಾಖಾವಾರು, ದರ್ಜೆವಾರು ಹಾಗೂ ಜಿಲ್ಲಾವಾರು ವಿವರ ನೀಡಬೇಕು)

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

(ಅ) ೯೩ ಇಲಾಖೆಗಳಲ್ಲಿ ೧೯೮೫-೮೬ರಲ್ಲಿ ಒಟ್ಟಿಗೆ ೨೫,೪೧೭ ವರ್ಗಾವಣೆಯನ್ನು ಮಾಡಲಾಗಿತ್ತು. ಇಲಾಖಾವಾರು ವಿವರವನ್ನು ಲಗತ್ತಿಸಿದ ಪಟ್ಟಿಯಲ್ಲಿ ತೋರಿಸಲಾಗಿದೆ. ಆದರೆ, ಬ್ಲಾಕ್ ವಾರು ಮತ್ತು ಜಿಲ್ಲಾವಾರು ಮಾಹಿತಿಯು ಲಭ್ಯವಿಲ್ಲ. ೧೯೮೬-೮೭ನೇ ವರ್ಷದಲ್ಲಿ ೧-೪-೧೯೮೬ರಿಂದ ಈವರೆಗೆ ಮಾಡಲಾದ ವರ್ಗಾವಣೆಯ ವಿವರಣೆಯನ್ನು ಕೇಳಲಾಗಿದ್ದು ಅವನ್ನು ಸಂಗ್ರಹಿಸಲಾಗುತ್ತಿದೆ.

(ಆ) ವರ್ಗಾವಣೆ ಹೊಂದಿರುವ ಸರ್ಕಾರಿ ನೌಕರರಿಗೆ ತಮ್ಮ ವರ್ಗಾವಣೆ ಭತ್ಯವನ್ನು ಪಡೆಯಲು ಒಂದು ವರ್ಷದ ಕಾಲಾವಕಾಶವು ಇರುವುದರಿಂದ ಈ ವರ್ಗಾವಣೆಗಳಿಗೆ ತಗುಲಿದ ವೆಚ್ಚವನ್ನು ಈಗಲೇ ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ.

(ಇ) ೧೯೮೫-೮೬ರಲ್ಲಿ ೯೩ ಇಲಾಖೆಗಳಲ್ಲಿ ಮಾಡಿರುವ ಅವಧಿಪೂರ್ವ ವರ್ಗಾವಣೆಯ ಇಲಾಖಾವಾರು ವಿವರಣೆಯನ್ನು ಲಗತ್ತಿಸಿದ ಪಟ್ಟಿಯಲ್ಲಿ ತೋರಿಸಲಾಗಿದೆ.

ವರ್ಗಾವಣೆಯ ವಿವರಣಾ ಪಟ್ಟಿ

ಕ್ರಮಾಂಕ	ಇಲಾಖೆ	ಅವಧಿಪೂರ್ಣ ವರ್ಗಾವಣೆಯ ಸಂಖ್ಯೆ	ಒಟ್ಟು ವರ್ಗಾವಣೆಯ ಸಂಖ್ಯೆ
೧	೨	೩	೪
೧	ಸೈನಿಕ ಕಲ್ಯಾಣ ಮತ್ತು ಪುನರ್ವಸತಿ	—	೮
೨	ತಾಂತ್ರಿಕ ಶಿಕ್ಷಣ	೩೦	೫೮
೩	ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು	೧೧೪	೧೩೮
೪	ಔಷಧ ನಿಯಂತ್ರಣ	—	೪
೫	ಕಾರಾಗೃಹಗಳ ಮಹಾನಿರೀಕ್ಷಕರು	೬	೧೨೭
೬	ಆಡಳಿತ ತರಬೇತಿ ಸಂಸ್ಥೆ, ಮೈಸೂರು	—	—
೭	ಸಾರ್ವಜನಿಕ ಗ್ರಂಥಾಲಯ	೧೨೪	೧೨೪
೮	ಸಾರಿಗೆ ಆಯುಕ್ತರು	೪೬	೧೨೯
೯	ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ನಿರ್ದೇಶನಾಲಯ	೨೧	೯೪
೧೦	ಖಜಾನೆ	೭೬	೧೪೪
೧೧	ಸರಕು ಖರೀದಿ	—	—
೧೨	ಕರ್ನಾಟಕ ಸರ್ಕಾರಿ ವಿಮಾ	೩೭	೪೯
೧೩	ಮೀನುಗಾರಿಕೆ ನಿರ್ದೇಶನಾಲಯ	೩	೧೨೯
೧೪	ಅಬಕಾರಿ ಆಯುಕ್ತರು	೨೧೭	೨೭೧
೧೫	ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ	—	೧
೧೬	ಪ್ರಾಚ್ಯವಸ್ತು ಸಂಗ್ರಹಾಲಯ	—	—
೧೭	ವಿಭಾಗಾಧಿಕಾರಿಗಳು, ಬೆಂಗಳೂರು	೫೮	೯೧
೧೮	ಪದವಿಪೂರ್ವ ಶಿಕ್ಷಣ	—	—

೧	೨	೩	೪
೧೯	ನಗರ ಯೋಜನಾ ನಿರ್ದೇಶಕರು	೧೮	೮೩
೨೦	ಜಿಲ್ಲಾಧಿಕಾರಿಗಳು, ಶಿವಮೊಗ್ಗ	೩	೧೧೩
೨೧	ಪತ್ರಾಗಾರ ನಿರ್ದೇಶಕರು	೨	೨
೨೨	ಅಡ್ವೋಕೇಟ್ ಜನರಲ್	—	—
೨೩	ರಾಜ್ಯ ಲೆಕ್ಕಪತ್ರ	೧೬	೧೯೫
೨೪	ವೈಮಾನಿಕ ಶಿಕ್ಷಣ	—	—
೨೫	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಸಚಿವಾಲಯ)	—	—
೨೬	ಜಿಲ್ಲಾಧಿಕಾರಿ, ರಾಯಚೂರು	೨೫	೮೪
೨೭	ತೂಕ ಮತ್ತು ಅಳತೆ ನಿಯಂತ್ರಣ	೧೬	೬೬
೨೮	ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು	—	೫
೨೯	ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು	೬೨	೪೫೩
೩೦	ಜಿಲ್ಲಾಧಿಕಾರಿ, ಬಿಜಾಪುರ	೪೦	೨೩೧
೩೧	ಎನ್.ಸಿ.ಸಿ. ನಿರ್ದೇಶಕರು	೩	೪೮
೩೨	ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆ	೯	೩೩
೩೩	ವಾರ್ತಾ ಮತ್ತು ಪ್ರಚಾರ	೪	೨೮
೩೪	ಮಾರುಕಟ್ಟೆ	೧೦೬	೨೬೯
೩೫	ವ್ಯವಸಾಯ	೫೫	೮೬೨
೩೬	ಜಿಲ್ಲಾಧಿಕಾರಿ, ಮೈಸೂರು	೨	೧೦೪
೩೭	ವಿಭಾಗಾಧಿಕಾರಿ, ಗುಲ್ಬರ್ಗಾ	೧೨	೯೬
೩೮	ಜಿಲ್ಲಾಧಿಕಾರಿ, ಕಾರವಾರ	೩	೧೬೯
೩೯	ಜಿಲ್ಲಾಧಿಕಾರಿ, ಕೊಡಗು	—	೨೦
೪೦	ಜಿಲ್ಲಾಧಿಕಾರಿ, ಕೋಲಾರ	೧೦	೧೩೮
೪೧	ಉದ್ಯೋಗ ಮತ್ತು ತರಬೇತಿ	೧೪	೧೪೩
೪೨	ಕಾಲೇಜು ಶಿಕ್ಷಣ	೨೮	೧೭೬
೪೩	ವಾಣಿಜ್ಯ ತೆರಿಗೆ	೧೫೫	೨೪೭
೪೪	ಲೋಕಾಯುಕ್ತ	—	೨
೪೫	ಆಹಾರ ಮತ್ತು ನಾಗರೀಕ ಸರಬರಾಜು	೯	೨೨
೪೬	ಧಾರ್ಮಿಕ ದತ್ತಿ ಆಯುಕ್ತರು, ಬೆಳಗಾಂ	—	—
೪೭	ಜಿಲ್ಲಾಧಿಕಾರಿ, ಮಂಗಳೂರು	೨	೬೨
೪೮	ಪಠ್ಯಪುಸ್ತಕ ನಿರ್ದೇಶಕರು	—	—
೪೯	ಅಭಿಯೋಗ ಮತ್ತು ವ್ಯಾಜ್ಯಗಳು	೩೮	೭೭
೫೦	ಆರಕ್ಷಕ ಮಹಾ ನಿರ್ದೇಶಕರ, ಗೃಹರಕ್ಷಕದಳದ ಮಹಾ ಸಮಾದೇಷ್ಟರ ಮತ್ತು ನಾಗರೀಕ ರಕ್ಷಣಾ	—	೯

೧	೨	೩	೪
೫೧	ರಾಜ್ಯ ವೃತ್ತಿ ಶಿಕ್ಷಣ	೨	೨
೫೨	ತೋಟಗಾರಿಕೆ	೯	೨೮೨
೫೩	ಧಾರ್ಮಿಕ ದತ್ತಿ ಆಯುಕ್ತರು ಬೆಂಗಳೂರು	೨	೧೬
೫೪	ಗಣಿ ಮತ್ತು ಭೂ ವಿಜ್ಞಾನ	೫	೪೬
೫೫	ಯುವಜನ ಸೇವೆ ಮತ್ತು ಕ್ರೀಡೆ	೧	೫೫
೫೬	ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು	೧೬.೫	೨೪೨
೫೭	ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ	—	—
೫೮	ಪಶುಪಾಲನೆ ಮತ್ತು ಪಶುವೈದ್ಯ	೧.೨೧	೫೮೩
೫೯	ಮುಖ್ಯ ಇಂಜಿನೀಯರು, ರಾಷ್ಟ್ರೀಯ ಹೆದ್ದಾರಿ	೭	೨೫
೬೦	ಜಿಲ್ಲಾಧಿಕಾರಿ, ಬೆಂಗಳೂರು	೯೧	೨೯೫
೬೧	ಮುಖ್ಯ ಇಂಜಿನೀಯರು, ಜಲಸಂಪನ್ಮೂಲ	೪೭	೨೦೭
೬೨	ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ	೪	೭
೬೩	ಜಿಲ್ಲಾಧಿಕಾರಿ, ತುಮಕೂರು	೯	೧೦೬
೬೪	ಜಿಲ್ಲಾಧಿಕಾರಿ, ಬೀದರ್	—	—
೬೫	ಜಿಲ್ಲಾಧಿಕಾರಿ, ಚಿಕ್ಕಮಗಳೂರು	೬	೧೦೨
೬೬	ಸರ್ಕಾರಿ ಗಣಕ ಕೇಂದ್ರ	—	—
೬೭	ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ	—	—
೬೮	ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರು	೯	೧೨
೬೯	ಅಗ್ನಿಶಾಮಕ ದಳದ ನಿರ್ದೇಶಕರು	೩	೧೩೫
೭೦	ಜಿಲ್ಲಾಧಿಕಾರಿ, ಗುಲ್ಬರ್ಗ	—	೧೦೦
೭೧	ಜಿಲ್ಲಾಧಿಕಾರಿ, ಹಾಸನ	೫೩	೧೬೮
೭೨	ಜಿಲ್ಲಾಧಿಕಾರಿ, ಚಿತ್ರದುರ್ಗ	೧೭	೧೭೬
೭೩	ಜಿಲ್ಲಾಧಿಕಾರಿ, ಬಳ್ಳಾರಿ	೭	೮೨
೭೪	ಭಾಷಾಂತರ ನಿರ್ದೇಶನಾಲಯ	—	—
೭೫	ಮುಖ್ಯ ವಿದ್ಯುತ್ ಪರಿವೀಕ್ಷಕರು	೨	೨
೭೬	ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು	೮೫೩	೩೫೨೬
೭೭	ವಿಭಾಗಾಧಿಕಾರಿಗಳು, ಮೈಸೂರು	೧೧೪	೬೧೦
೭೮	ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡ	೮.೨೯	೧೪೫೭
೭೯	ಜಿಲ್ಲಾಧಿಕಾರಿ, ಬೆಳಗಾಂ	೯	೨೫೦
೮೦	ವಿಭಾಗಾಧಿಕಾರಿ, ಬೆಳಗಾಂ	೧೧	೧೨೫
೮೧	ಬಂದರು ಮತ್ತು ಒಳನಾಡು ಜಲಸಾರಿಗೆ	೬	೨೬
೮೨	ಕಾರ್ಖಾನೆ ಮತ್ತು ಬಾಯ್ಲರುಗಳು	—	೨
೮೩	ಮುಖ್ಯ ಅಭಿಯಂತರರು, ಸಣ್ಣ ನೀರಾವರಿ	೯	೧೯
೮೪	ನಿರ್ದೇಶಕರು, ಭೂ ಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳು	೮೩	೨೨೯

೧	೨	೩	೪
೮೫	ಸಕ್ಕರೆ ನಿರ್ದೇಶಕರು	—	೧
೮೬	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	೪೭೪	೫೨೮೨
೮೭	ಜಿಲ್ಲಾಧಿಕಾರಿ, ಧಾರವಾಡ	೬	೨೧೧
೮೮	ಜಿಲ್ಲಾಧಿಕಾರಿ, ಮಂಡ್ಯ	೧೨	೬೦
೮೯	ಸಾರ್ವಜನಿಕ ಶಿಕ್ಷಣ	೧೦೮೫	೫೩೭೯
೯೦	ಸಹಕಾರಿ ಸಂಘಗಳ ರಿಜಿಸ್ಟ್ರಾರರು	೧೦೧	೩೬೧
೯೧	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್	೪೧	೮೩
೯೨	ರೆಡ್ ಡೇನ್ ಯೋಜನೆ	—	೨
೯೩	ಪ್ರವಾಸೋದ್ಯಮ	—	೨
		೫೫೧೭	೨೫,೪೧೭

ಶಿವಮೊಗ್ಗದಲ್ಲಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ

೪೩ (೩೭೪) ಶ್ರೀ ಡಿ.ಜೆ. ಬಸವನ ಗೌಡ (ಹೊನ್ನಾಳಿ).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಶಿವಮೊಗ್ಗ ನಗರದಲ್ಲಿ ವೈದ್ಯಕೀಯ ಕಾಲೇಜನ್ನು ಪ್ರಸಕ್ತ ವರ್ಷದಿಂದ ಪ್ರಾರಂಭಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ, ಈ ವರ್ಷದಿಂದ ಪ್ರಾರಂಭಿಸಲಾಗುವುದೆ ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಕಾರವಾರ ತಾಲ್ಲೂಕಿನ ಆರೋಗ್ಯ ಇಲಾಖೆಯಿಂದ ಕಟ್ಟಡಗಳ ದುರಸ್ತಿ ಕುರಿತಂ

೪೪ (೩೩೪) ಶ್ರೀ ಪ್ರಭಾಕರ ರಾಣೆ (ಕಾರವಾರ).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕಾರವಾರ ತಾಲ್ಲೂಕಿನ ಅಂಗಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ಮತ್ತು ಅಲ್ಲಿಯ ನೌಕರರ ವಸತಿ ಗೃಹಗಳ ಕಟ್ಟಡ ಹಾಗೂ ಆಮದಳ್ಳಿ ಪ್ರಾಥಮಿಕ ಆರೋಗ್ಯ ಘಟಕದ ಕಟ್ಟಡಗಳಿಗೆ ತುರ್ತು ದುರಸ್ತಿ ಆಗಬೇಕಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈವರೆವಿಗೂ ದುರಸ್ತಿ ಮಾಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಅಬ್ಕಾರಿ ಸಚಿವರು).—

ಅ) ಬಂದಿದೆ.